**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ**

**ಸಿ ಸಿ ನಂಃ 382/2023**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**– ವಿರುದ್ಧ –**

ಆರೋಪಿತರುಃ 1. **ಸೂರ್ಯನಾರಾಯಣ ತಂದೆ ಈಶ್ವರ ಹೆಗಡೆ,**
ಪ್ರಾಯಃ 57 ವರ್ಷ, ಉಃ ಕೃಷಿ ಕೆಲಸ,
ವಾಸಃ ಪಾವಲಮಕ್ಕಿ, ವಂದೂರು, ತಾಃ ಹೊನ್ನಾವರ.

2. **ವೃಂದಾ ಕೋಂ ಸೂರ್ಯನಾರಾಯಣ ಹೆಗಡೆ,**
ಪ್ರಾಯಃ 53 ವರ್ಷ, ಉಃ ಕೃಷಿ ಕೆಲಸ,
ವಾಸಃ ಪಾವಲಮಕ್ಕಿ, ವಂದೂರು, ತಾಃ ಹೊನ್ನಾವರ.

3. **ಶಿಲ್ಪಾ ಕೋಂ ವಿನಾಯ ಹೆಗಡೆ,**
ಪ್ರಾಯಃ 32 ವರ್ಷ, ಉಃ ಮನೆ ವಾರ್ತೆ,
ವಾಸಃ ಪಾವಲಮಕ್ಕಿ, ವಂದೂರು, ತಾಃ ಹೊನ್ನಾವರ.

4. **ವಿನಾಯಕ ತಂದೆ ನಾರಾಯಣ ಹೆಗಡೆ,**
ಪ್ರಾಯಃ 37 ವರ್ಷ, ಉಃ ಬಿಸಿನೆಸ್,
ವಾಸಃ ಪಾವಲಮಕ್ಕಿ, ವಂದೂರು, ತಾಃ ಹೊನ್ನಾವರ.

**ದೋಷಾರೋಪಣೆ**

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ದೋಪಾರೋಪಣೆ ಏನೆಂದರೆಃ–

ದಿನಾಂಕಃ 19–01–2022 ರಂದು ಮಧ್ಯಾಹ್ನಃ03–45 ಗಂಟೆ ಸಮಯದಲ್ಲಿ ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯ ಹೊನ್ನಾವರ ತಾಲ್ಲೂಕಿನ ವಂದೂರು ಪಾವಲಮಕ್ಕಿಯ ರಸ್ತೆಯಲ್ಲಿ ಚಾಸಾ–1 ರವರು ತೋಟಕ್ಕೆ ನುಗ್ಗಿದ ದನ ಕರುಗಳನ್ನು ಗುಡ್ಡಕೆ ಓಡಿಸುತ್ತಿರುವಾಗ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ–1 ರವರನ್ನು ಅಡ್ಡಗಟ್ಟಿ ಅವರು ಹಕ್ಕುಳ್ಳ ದಿಕ್ಕಿನಲ್ಲಿ ಸಂಚರಿಸದಂತೆ ಕಾನೂನು ಬಾಹಿರವಾಗಿ ತೆಡೆದು ನಿಗ್ರಹಿಸುವ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 341 ಸಹ ಕಲಂ 34** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ–1 ರವರನ್ನು ಉದ್ದೇಶಿಸಿ ತೋಟದಲ್ಲಿ ಇದ್ದ ಆಕಳುಗಳನ್ನು ಯಾಕೆ ಗುಡ್ಡಕ್ಕೆ ಓಡಿಸುತ್ತಿಯಾ ಬೇವರ್ಸಿ ರಂಡೆ ಅಂತಾ ಅವ್ಯಾಚ್ಯ ಶಬ್ದದಿಂದ ನಿಂದಿಸಿದ್ದರಿಂದ ನಿಮ್ಮ ಮೇಲೆ ಭಾ.ದಂ.ಸಂ.ಕಲಂ **504 ಸಹವಾಚಕ ಕಲಂ 34** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 1 ನೇ ಆರೋಪಿತನಾದ ನೀನು ಚಾಸಾ–1 ರವರ ಮೈ

ಮೇಲೆ ಒಮ್ಮೇಲೆ ಏರಿ ಬಂದು ತಲೆಯ ಮುಂದಿನ ಕೂದಲನ್ನು ಹಿಡಿದು ಬಗ್ಗಿಸಿ ಬೆನ್ನಿನ ಮೇಲೆ ಹೊಡೆದು, ಅವರ ಮಾನಕ್ಕೆ ಕುಂದುಂಟು ಪಡಿಸುವ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 354 ಸಹ ಕಲಂ 34** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ನಾಲ್ಕನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 4 ನೇ ಆರೋಪಿತನಾದ ನೀನು ಚಾಸಾ-1 ರವರು ಧರಿಸಿದ ನೈಟಿಯನ್ನು ಹಿಡಿದು ಏಳೆದು ಹರಿದು ಹಾಕಿ ದೂಡಿ ನೆಲಕ್ಕೆ ಕೆಡವಿ ಅವರ ಮಾನಕ್ಕೆ ಕುಂದುಂಟು ಪಡಿಸುವ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹ ಕಲಂ 34** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಸ್ವ ಇಚ್ಛೆಯಿಂದ ಚಾಸಾ-1 ರವರಿಗೆ ಕಾಲಿನಿಂದ ಸಿಕ್ಕ ಸಿಕ್ಕಲ್ಲಿ ಒದ್ದು ಸಾದಾ ಸ್ವರೂಪದ ಗಾಯಪಡಿಸುವ ಮೂಲಕ, ಭಾ.ದಂ.ಸಂ.ಕಲಂ **323 ಸಹ ಕಲಂ 34** ನೇದರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರನ್ನು ಉದ್ದೇಶಿಸಿ, ಇವತ್ತು ತಪ್ಪಿಸಿಕೊಂಡೆ ಬೆವರ್ಸಿ ರಂಡೆ ಇನ್ನೊಮ್ಮೆ ಸಿಕ್ಕು ನಿನ್ನ ಕೊಂದು ಹುಗಿದು ಹಾಕುತ್ತೇವೆ ಅಂತಾ ಜೀವ ಬೆದರಿಕೆ ಹಾಕಿ, ಭಾ.ದಂ.ಸಂ. ಕಲಂ **506 ಸಹ ಕಲಂ 34** ನೇದರಡಿ ಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ನೀವು ಮೇಲಿನ ಆರೋಪಗಳಡಿಯಲ್ಲಿ ವಿಚಾರಣೆಗೆ ಗುರಿಯಾಗ ತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆಃ **1.** ನಿಮ್ಮ ಮೇಲೆ ಹೊರಿಸಲಾದ ಆರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

ದಿನಾಂಕಃ- 05-10-2023 **ಪ್ರಧಾನ ಪ್ರ.ದ.ನ್ಯಾದಂಡಾಧಿಕಾರಿ, ಹೊನ್ನಾವರ.**

ಆರೋಪಿತರುಃ

| | | |
|---|---|---|
| 1. | ಸೂರ್ಯನಾರಾಯಣ ತಂದೆ ಈಶ್ವರ ಹೆಗಡೆ, | |
| 2. | ವೃಂದಾ ಕೋಂ ಸೂರ್ಯನಾರಾಯಣ ಹೆಗಡೆ, | |
| 3. | ಶಿಲ್ಪಾ ಕೋಂ ವಿನಾಯ ಹೆಗಡೆ, | |
| 4. | ವಿನಾಯಕ ತಂದೆ ನಾರಾಯಣ ಹೆಗಡೆ, | |